# ಪಾಲಿಸೆ ಎನ್ನ ಶ್ರೀಮಹಾಲಕ್ಷ್ಮೀ

1. **Ref.:** Dasara Padagalu – Purandara Dasara Keerthane, Vol 4, Edited by Shri Pavanje Gururao, Sriman Madhwa Siddantha Granthalaya, Udupi, page no. 375.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 183.
3. **Note:** The wordings, given without highlights, are as per Ref. 1. These wordings fully match with the singer. The wordings given in Ref. 2 are similar to Ref. 1 except few wordings which are marked in yellow highlights. The lyrics in Ref. 3 are same as in Ref. 1.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
5. **Note:** Singer has followed these lyrics.

ರಾಗ: ಶ್ರೀರಾಗ ತಾಳ: ಅಟ್ಟ

ಪಾಲಿಸೆ ಎನ್ನ ಶ್ರೀ ಮಹಾಲಕ್ಷ್ಮೀ
ಪಾಲಿಸೆ ಎನ್ನನು ಪಾಲಾಬ್ಧಿ ಸಂಜಾತೆ || ಪ ||

ಲಲಿತಾಂಗಿ ಶುಭೆ ದೇವಿ ಮಂಗಳೆ ದೇವಿ || ಅಪ ||

ವೇದಾಭಿಮಾನಿ ಸಾರಸಾಕ್ಷಿ ಶ್ರೀಧರ ರಮಣಿ
ಕಾದುಕೊ ನಿನ್ನಯ ಪಾದ ಸೇವಕರನ್ನು
ಆದಿಶಕ್ತಿ ಸರ್ವಾಧಾರೆ ಗುಣಪೂರ್ಣೆ || 1 ||

ದಯದಿಂದ ನೋಡೆ ಭಜಿಪ ಭಕ್ತರ ಭಯ ದೂರ ಮಾಡೆ
ದಯಪಾಲಿಸೆ ಮಾತೆ ತ್ರೈಲೋಕ್ಯ ವಿಖ್ಯಾತೆ
ಜಯ ದೇವಿ ಸುವ್ರತೆ (ಜಗದೀಶನ) ಹಯವದನನ ಪ್ರೀತೆ || 2 ||

ನೀನಲ್ಲದನ್ಯ ರಕ್ಷಿಪರನು ಕಾಣೆ ನಾ ಮುನ್ನ
ದಾನವಾಂತಕ ಸಿರಿ ಪುರಂದರ ವಿಠಲನ
ಧ್ಯಾನಿಪ ಭಕುತರ ಮಾನ ನಿನ್ನದು ತಾಯೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಪಾಲಾಬ್ಧಿ ಸಂಜಾತೆ** – ಅಮೃತಕ್ಕಾಗಿ ದೇವ ದಾನವರು ಸಮುದ್ರ ಮಥನ ಮಾಡಿದ ಸಂದರ್ಭದಲ್ಲಿ, ಸಮುದ್ರದಿಂದ ಹೊರಬಂದು ವಿಷ್ಣುವಿನ ವಕ್ಷಃಸ್ಥಳವನ್ನು ಸೇರಿದವಳು ಲಕ್ಷ್ಮಿಯೆಂದು ಪುರಾಣದ ಕತೆ. ಪಾಲಾಬ್ಧಿಯೆಂದರೆ ಹಾಲುಗಡಲು, ಕ್ಷೀರ ಸಮುದ್ರ.

**ವೇದಾಭಿಮಾನಿ** – ವೇದವೆಂದರೆ ಹರಿಯ ಹಿರಿಮೆಯನ್ನು ತೋರಿಸುವ ಅಪೌರುಷೇಯ ಗ್ರಂಥ ರಾಶಿ. ಅದನ್ನು ಚತುರ್ಮುಖ ಬ್ರಹ್ಮನು ಜಗತ್ತಿನ ಜನರಿಗೆ ತಿಳಿಯಪಡಿಸುವಂತೆ ಅವನನ್ನು ಪ್ರೇರಿಸದವಳು ಲಕ್ಷ್ಮಿಯೇ. ಹರಿಯ ಹಿರಿಮೆ ಲಕ್ಷ್ಮಿಗೆ ತಿಳಿದಿರುವಂತೆ ಬ್ರಹ್ಮನಿಗೂ ತಿಳಿಯದು, ಏಕೆಂದರೆ ಲಕ್ಷ್ಮಿಯು ಅವನಿಗೆ 'ನಿತ್ಯಾವಿಯೋಗಿನಿ'.

**ಆದಿಶಕ್ತಿ...** – ಹರಿಯ ಸಂಕಲ್ಪದಿಂದ ಬ್ರಹ್ಮಾದಿಗಳ ಸೃಷ್ಟಿ, ಬ್ರಹ್ಮನಿಂದ ಬ್ರಹ್ಮಾಂಡ ಸೃಷ್ಟಿ. ಬ್ರಹ್ಮಾದಿ ದೇವತೆಗಳಿಂದ ಬ್ರಹ್ಮಾಂಡದ ವ್ಯಾಪಾರಗಳ ವ್ಯವಸ್ಥೆ. ಇವೆಲ್ಲಕ್ಕೂ ಲಕ್ಷ್ಮಿಯ ಶಕ್ತಿಯೇ ಮೂಲಕಾರಣ. ಅವಳೇ ಮೂಲಪ್ರಕೃತಿ. ಚಿತ್ ಪ್ರಕೃತಿಯಾದುದರಿಂದ ಎಲ್ಲ ಇರವಿಗೂ ಅವಳೇ ಆಸರೆ; ಅಪ್ರಾಕೃತವಾದ ಸತ್ತ್ವ, ರಜಸ್ಸು, ತಮಸ್ಸು ಈ ಗುಣಗಳಿಂದ ಶ್ರೀ, ಭೂ, ದುರ್ಗಾ ರೂಪಗಳನ್ನು ಧರಿಸುತ್ತಾಳಾಗಿ ಗುಣಪೂರ್ಣೆ.

**Classification:** Keerthane
**Ankita:** siri purandara vittala
**Location:** NA
**Category:** Lakshmi stuti
**Sub-Category:** Lakshmi, mangala, devi, Dhyana, tayi, hayavadana, daya, bhava, veda, purna, jaya, Vishnu,
**Pravachana:** NA
**Explanation:** NA